# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 643 |
| ಉತ್ತರಿಸಬೇಕಾದ ದಿನಾಂಕ | : 23.12.2022 |
| ಸದಸ್ಯರ ಹೆಸರು | : ಶ್ರೀ ಡಿ ಎಸ್ ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ವ್ಯಕ್ತಿವರ ಕ್ರೀಡಾ ಪಟುಗಳು ಮಾನಸಿಕ ಒತ್ತಡದಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು |
| ಆ | ಹಾಗಿದ್ದಲ್ಲಿ ಈ ಕ್ರೀಡಾಪಟುಗಳ ಮಾನಸಿಕ ಒತ್ತಡದ ನಿವಾರಣೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ರಾಜ್ಯದ ಕ್ರೀಡಾಪಟುಗಳಿಗೆ ಉನ್ನತ ಕ್ರೀಡಾ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವಾಗ ಅಗತ್ಯವಾದ ದೈಹಿಕ ಹಾಗೂ ಮಾನಸಿಕ ಕ್ಷಮತೆಯನ್ನು ರೂಢಿಸಿಕೊಳ್ಳಲು ಅಗತ್ಯವಾದ ಸೌಲಭ್ಯಗಳನ್ನೊಳಗೊಂಡ ಕ್ರೀಡಾ ವಿಜ್ಞಾನ ಕೇಂದ್ರಗಳನ್ನು ಬೆಂಗಳೂರು, ಮಂಡ್ಯಗಳಲ್ಲಿ ಆರಂಭಿಸಲಾಗಿದ್ದು, ಉಡುಪಿಯಲ್ಲಿ ಶೀಘ್ರ ಆರಂಭಿಸಲಾಗುವುದು. ಈ ಕ್ರೀಡಾ ವಿಜ್ಞಾನ ಕೇಂದ್ರಗಳಲ್ಲಿ ಕ್ರೀಡಾ ಮಾನಸಿಕ ತಜ್ಞರ ಸೇವೆ ಸೇರಿದಂತೆ ವಿವಿಧ ಕ್ರೀಡಾ ವಿಜ್ಞಾನ ಶಾಖೆಗಳ ಪರಿಣತರಿಂದ ಅತ್ಯಾಧುನಿಕ ಸೌಲಭ್ಯಗಳೊಂದಿಗೆ ಅಗತ್ಯ ಸೇವೆಯನ್ನು ನೀಡಲಾಗುತ್ತಿದೆ. |
| ಇ | ಕ್ರೀಡಾ ಪಟುಗಳ ಮಾನಸಿಕ ಆರೋಗ್ಯ ಹಾಗೂ ಯೋಗ ಕ್ಷೇಮಕ್ಕಾಗಿ ಮೀಸಲಿಟ್ಟ ಅನುದಾನವೆಷ್ಟು: | ಕ್ರೀಡಾ ಪಟುಗಳ ಮಾನಸಿಕ ಆರೋಗ್ಯ ಮತ್ತು ಯೋಗ ಕ್ಷೇಮ ಸೇರಿದಂತೆ ವಿವಿಧ ಅತ್ಯಗತ್ಯ ಆಧುನಿಕ ಸೇವೆಗಳನ್ನು ಒದಗಿಸಲು ಕ್ರೀಡಾ ವಿಜ್ಞಾನ ಕೇಂದ್ರಗಳ ಸ್ಥಾಪನೆಗೆ ಕೆಳಕಂಡಂತೆ ವೆಚ್ಚ ಭರಿಸಲಾಗಿದೆ.<br><br>ಕ್ರ ಸಂ / ಜಿಲ್ಲೆ / ಮೊತ್ತ (ಲಕ್ಷಗಳಲ್ಲಿ)<br>1 / ಬೆಂಗಳೂರು / 175 ಲಕ್ಷಗಳು<br>2 / ಉಡುಪಿ / 181ಲಕ್ಷಗಳು<br>3 / ಮಂಡ್ಯ / 199 ಲಕ್ಷಗಳು<br><br>2021-22ನೇ ಸಾಲಿನಲ್ಲಿ ಮಂಡ್ಯ ನಗರದಲ್ಲಿ ಕ್ರೀಡಾ ವಿಜ್ಞಾನ ಕೇಂದ್ರ ಸ್ಥಾಪನೆಗಾಗಿ ಮೂಲ ಸೌಕರ್ಯಗಳನ್ನು ಒದಗಿಸಲು ರೂ 25.00 ಲಕ್ಷ ವೆಚ್ಚ ಭರಿಸಲಾಗಿದೆ. |
| ಈ | ಮಾನಸಿಕ ಕಾರಣದಿಂದ ಸ್ಪರ್ಧೆಗಳಿಂದ ಹಿಂದೆ ಸರಿದ ವ್ಯಕ್ತಿವರ ಕ್ರೀಡಾ ಪಟುಗಳನ್ನು ಇತರ ಕ್ರೀಡಾ ಪಟುಗಳೊಂದಿಗೆ ತೊಡಗಿಸಿ ಕೊಳ್ಳಲು ಸರ್ಕಾರವು ಏನಾದರೂ ಪ್ರಯತ್ನಗಳನ್ನು ಮಾಡಿದೆಯೇ ? | ಮಾನಸಿಕ ಒತ್ತಡದ ಕಾರಣದಿಂದ ಕ್ರೀಡಾ ಪ್ರದರ್ಶನದಲ್ಲಿ ವಿಫಲತೆ ಹಾಗೂ ಕ್ರೀಡಾ ಕ್ಷೇತ್ರದಿಂದ ಹಿಂದೆ ಸರಿಯುವ ಕ್ರೀಡಾಪಟುಗಳಿಗೆ ಅಗತ್ಯವಾದ ಕ್ರೀಡಾ ಮನೋವೈದ್ಯರ ಸಲಹಾ ಸೇವೆಗಳನ್ನು ಕ್ರೀಡಾ ವಿಜ್ಞಾನ ಕೇಂದ್ರಗಳ ಮೂಲಕ ಒದಗಿಸಲಾಗುತ್ತಿದೆ. |

| | | |
|---|---|---|
| | | ಅಲ್ಲದೇ, ನಿಮ್ಹಾನ್ಸ್ ಸಂಸ್ಥೆಯ ಸಹಯೋಗದೊಂದಿಗೆ ಮಾನಸಿಕ ಆರೋಗ್ಯ ಸಲಹಾ ಸೇವೆಯನ್ನು ರಾಜ್ಯದಾದ್ಯಂತ ಒದಗಿಸಲಾಗುತ್ತಿದ್ದು, ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪ್ರಾರಂಭಿಕ ಹಂತದಲ್ಲಿಯೇ ಗುರುತಿಸಿ, ವೃತ್ತಿಪರ ಸೇವೆ ನೀಡಲು ಕ್ರಮವಹಿಸಲಾಗಿದೆ. |

**ವೈಎಸ್ ಡಿ/ಸಿಡಿಎನ್/179/2022**

**(ಡಾ|| ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು